ಅಪರಿಚಿತ ವಾಸನೆಯ, ನಿಗೂಢಗಳ, ಮುಗಿದುಹೋಗುವ ಹಾಗೂ ಮುಂದುವರಿಯುವ ದಾರಿಗಳ ಹೊಸ ವರ್ಷದಲ್ಲಿ ಅನಾಮಿಕತೆಯಿದೆ, ಸೌಂದರ್ಯವೂ ಇದೆ.



■ ಕಾವ್ಯಾ ಕಡಮೆ

# ಕಾರ್ತಿಕ ಮಾಸದಲ್ಲಿ ಚೈತ್ರ ಬಂದ ಹಾಗೆ

ಹೊಸ ವರ್ಷ ಅಂದರೆ ಏನಿಲ್ಲ ತಾತಾ
ಗಡಿಯಾರದ ಮುಳ್ಳು ತಿರುಗೋದು
ಅಷ್ಟೇ

ಪ್ರತಿಭಾ ನಂದಕುಮಾರ್ ಅವರ 'ಹೊಸ ವರ್ಷ' ಕವನದ ಸಾಲು ಇದು. ಪುಟ್ಟಿಯ ಮಾತನ್ನು ಆಕೆಯ ಅಜ್ಜ ಕೂಡ, 'ಅಷ್ಟೇಮ್ಮಾ ಅಷ್ಟೇ' ಎಂದು ಬೊಚ್ಚು ಬಾಯಗಲಿಸಿ ಅನುಮೋದಿಸುತ್ತಾರೆ. ನಾಲ್ಕು ವರ್ಷದ ಪುಟ್ಟಿಯನ್ನೂ ಆಕೆಯ ತಾತನನ್ನೂ ಒಂದೇ ಬಿಂದುವಿನಲ್ಲಿರಿಸಿ ಕಾಣಿಸುವ, ಅವರ ಕಣ್ಣಿನಲ್ಲಿ ಲೋಕದ ಲಿಖಿತ ದೃಷ್ಟಿಯನ್ನು ಭೇದಿಸುವ ಪ್ರಯತ್ನ ಇದು.

ಕಾಣಿಸುವುದು ಯಾರಿಗೆ? ಆ ಎರಡು ವಯಸ್ಸಿನ ನಡುವಿನವರಿಗೆ. ಅವರೇ ಅಲ್ಲವೇ ಸಮಯವೆಂಬ ಈ ಓಡು ಗಡಿಯಾರದ ಚುಕ್ಕಾಣಿ ಹಿಡಿದವರು! 'ಒಂದು ವಯಸ್ಸಿನ ನಂತರ ಎಲ್ಲರೂ ಹೊರ ಲೋಕದ ಕಣ್ಣಿಗೆ ಅದೃಶ್ಯರಾಗಿ ಬಿಡಬಹುದು' ಎನ್ನುತ್ತಾರೆ ಪೊಲ್ಯಾಂಡಿನ ಕಾದಂಬರಿಗಾರ್ತಿ ಓಲ್ಗಾ ತೊಕಾರ್ಚಕ್. ಅದು ಸಾಧ್ಯವಿದೆ. ಮಕ್ಕಳಿಗೂ, ಮುದುಕರಿಗೂ ಜಾಗವಿಲ್ಲ ಆ ಲೋಕದಲ್ಲಿ. ಗಡಿಯಾರಗಳ ಲೋಕದಲ್ಲಿ. ಸಮಯವನ್ನು ಸಣ್ಣ ಸೆಕೆಂಡುಗಳಲ್ಲಿ ಹೋಳು ಮಾಡಿ ಅದಕ್ಕಷ್ಟು ಬೆಲೆ ಕಟ್ಟುವ ಈ ಸೋಗುಗಾರರ ಪ್ರಪಂಚದಲ್ಲಿ. ಊಂಹೂಂ. ಮಕ್ಕಳ ವಯಸ್ಸನ್ನು ವೃದ್ಧಿಸದೇ, ಮುದುಕರ ವಯಸ್ಸನ್ನು ತಗ್ಗಿಸದೇ, ಫೈನ್ ಟ್ಯೂನ್ ಮಾಡದೇ ಸಾಧ್ಯವಿಲ್ಲದ ಪವಾಡ ಅದು. ಈ ಅಂಗೀಕೃತ ವರ್ಣಪಟಲದ ಒಂದು ಅಂಚಿನಲ್ಲಿ ತುಂಡು ಬಟ್ಟೆ ಧರಿಸಿ 'ರಾ ರಾ ರಕ್ಕಮ್ಮ' ಹಾಡಿಗೆ ನರ್ತಿಸುವ ಪುಟ್ಟಿಯಿದ್ದರೆ, ಇನ್ನೊಂದು ಅಂಚಿಗೆ ಹೇರ್ ಡೈ ಹಾಕಿಕೊಂಡು 'ಗೋಲ್ಡನ್ ಬ್ಯಾಚುಲರ್' ಧಾರಾವಾಹಿಯಲ್ಲಿ ತನ್ನನ್ನು ಕಂಡುಕೊಳ್ಳುವ ಆಕೆಯ ಅಜ್ಜಯ್ಯನಿದ್ದಾರೆ. ಮತ್ತು ಅವರಿಬ್ಬರೂ ತಮ್ಮದಲ್ಲದ ದಿರಿಸನ್ನು ಆತ್ಮವಿಲ್ಲದೇ ತೊಟ್ಟಿದ್ದಾರೆ. ಈ ಮುಖವಾಡವಿಲ್ಲದೇ ಅವರನ್ನು ಸ್ವೀಕರಿಸುವ, ಮಾನಿಸುವ ಯಾವ ದಾರಿಯೂ ಕಾಣದ ಬಣ್ಣಗುರುಡುತನದಲ್ಲಿ ನಾವು, ಆ ನಡುವಿನವರಿದ್ದೇವೆ. ನಮ್ಮೆಲ್ಲರನ್ನೂ ಈ ಪಾಪಕೂಪದಿಂದ ಮೇಲೆತ್ತುವ ಶಕ್ತಿ ಯಾವುದದು? ಅಂಥದು ಒಂದಿದೆಯೇ? ಇದ್ದರೂ ಕಾಣುವ ಕಣ್ಣು, ದಿಟ್ಟಿಸುವ ಮನಸ್ಸು ನಮಗಿದೆಯೇ?




ಹೊಸ ವರ್ಷವೆಂದರೆ ಇಂಥ ಯಾವುದೋ ಒಂದು ಪಲ್ಲಟದ ಆರಂಭ. ನಿರೀಕ್ಷೆ. ಸಾಕಾರಗೊಳಿಸುವ ಹಂಬಲ. ಒಬ್ಬರೇ ವ್ಯಕ್ತಿ ಎಗ್ಗಿಲ್ಲದೇ ಎರಡು, ಮೂರು, ನಾಲ್ಕು ಸಾವಿರ ಕೋಟಿ ವರಮಾನವನ್ನು ಲಜ್ಜೆಯಿಲ್ಲದೇ ಘೋಷಿಸುವ ಕಾಲಘಟ್ಟ ಇದು. ಇದಿನ್ನೂ ಶುರುವಷ್ಟೇ ಎಂಬ ಧಾಡಸೀತನ ಬೇರೆ ಜೊತೆಗೆ. ಮಕ್ಕಳು, ಮೊಮ್ಮಕ್ಕಳನ್ನೊಳಗೊಂಡು ಮುಂದಿನ ಇಪ್ಪತ್ತು ತಲೆಮಾರಿನ ಭವಿಷ್ಯವನ್ನು ಈ ಹೊತ್ತೇ ಗಟ್ಟಿ ಮಾಡಿಡುವ, ಆ ಮೂಲಕ ತಮ್ಮ ಅಸ್ತಿತ್ವವನ್ನು ಶಾಶ್ವತವಾಗಿಸುವ ಹುನ್ನಾರ ಇದು. ಇನ್ನೊಂದು ಮುಖವಾಡ. ಇಂದಿನ ಜೀನಿಯಸ್‌ಗಳ್ಯಾರು, ನೀನು ಯಾರಂತೆ ಆಗ ಬಯಸುತ್ತೀ ಎಂದು ಇಂದಿನ ಕಾಲೇಜು ಹುಡುಗನನ್ನು ಕೇಳಿದರೆ ಅವನು ಪ್ರಪಂಚದ ಮೊದಲ ಹತ್ತು ಶ್ರೀಮಂತರ ಹೆಸರುಗಳನ್ನು ಪಟ್ಟಿ ಮಾಡುತ್ತಾನೆ. ಅವನ ಯೋಚನೆಗಳನ್ನು, ಆಕಾಂಕ್ಷೆಗಳನ್ನು ನಿರ್ಣಯಿಸುತ್ತಿರುವ, ಅವನ ಒಳಗನ್ನು ಎಗ್ಗಿಲ್ಲದೇ ಸವಾರಿ ಮಾಡುತ್ತಿರುವ ಈ ಹುಚ್ಚು ಕುದುರೆಯನ್ನು ನಿಗ್ರಹಿಸುತ್ತಿರುವ ಆ ಅಳವಿನ ಆಳವೆಷ್ಟು? ನೆತ್ತಿಯ ಪಸೆ ಆರದ ಇಂಥ